# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 692 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3) | ಉತ್ತರಿಸಬೇಕಾದ ದಿನಾಂಕ | 09/03/2026 |
| 4) | ಉತ್ತರಿಸುವವರು | ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಯುವನಿಧಿ ಕಾರ್ಯಕ್ರಮದಡಿ ಈವರೆವಿಗೂ ಎಷ್ಟು ಮಂದಿ ನಿರುದ್ಯೋಗ ಭತ್ಯೆಗಾಗಿ ನೋಂದಣಿ ಮಾಡಿಕೊಂಡಿದ್ದಾರೆ; ಹೆಸರು ಹಾಗೂ ವಿಳಾಸವಾರು ಮಾಹಿತಿ ನೀಡುವುದು; | ರಾಜ್ಯದಲ್ಲಿ ಯುವನಿಧಿ ಯೋಜನೆ ಅಡಿ ದಿ:02-03-2026 ರ ಅಂತ್ಯಕ್ಕೆ ಒಟ್ಟು 4,10,070 ಅಭ್ಯರ್ಥಿಗಳು ನೋಂದಾಯಿಸಿರುತ್ತಾರೆ. ಅವರುಗಳಲ್ಲಿ 3,08,267 ಫಲಾನುಭವಿಗಳಿಗೆ ಒಟ್ಟು ರೂ.912.46 ಕೋಟಿ ಮೊತ್ತದ ನಿರುದ್ಯೋಗ ಭತ್ಯೆಯನ್ನು ನೇರ ನಗದು ವರ್ಗಾವಣೆ ಮೂಲಕ ಪಾವತಿಸಲಾಗಿದೆ. |
| ಆ) | ಯೋಜನೆಗಾಗಿ ಎಷ್ಟು ಮಂದಿಗೆ ಈವರೆಗೂ ನಿರುದ್ಯೋಗ ಭತ್ಯ ನೀಡಲಾಗಿದೆ; (ಹೆಸರು ಹಾಗೂ ವಿಳಾಸದ ಮಾಹಿತಿ ನೀಡುವುದು) | Digital personal data protection Act, 2023 ರ ಉಪಬಂಧಗಳಡಿ ಯುವನಿಧಿ ಯೋಜನೆಯಡಿ ನೋಂದಾಯಿಸಿದ ಫಲಾನುಭವಿಗಳ ವೈಯಕ್ತಿಕ ದತ್ತಾಂಶವನ್ನು/ ಪೂರ್ಣ ಮಾಹಿತಿಯುಳ್ಳ ಪಟ್ಟಿಯನ್ನು ಫಲಾನುಭವಿಗಳ ಒಪ್ಪಿಗೆ ಇಲ್ಲದೆ ಮೂರನೇ ವ್ಯಕ್ತಿಗಳಿಗೆ ಒದಗಿಸಲು ಅವಕಾಶವಿರುವುದಿಲ್ಲ. ಆದ್ದರಿಂದ ಯುವನಿಧಿ ಯೋಜನೆಯಡಿ ನೋಂದಾಯಿಸಿದ ಅಭ್ಯರ್ಥಿಗಳು ಹಾಗೂ ಫಲಾನುಭವಿಗಳ ಸಂಖ್ಯೆ ಮತ್ತು ಪಾವತಿಸಿದ ನಿರುದ್ಯೋಗ ಭತ್ಯೆಯ ವಿವರಗಳನ್ನೊಳಗೊಂಡ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1**ರಲ್ಲಿ ಒದಗಿಸಿದೆ. |
| ಇ) | ಇನ್ನು ಎಷ್ಟು ಅರ್ಜಿಗಳು ನಿರುದ್ಯೋಗ ಭತ್ಯೆಗಾಗಿ ಸರ್ಕಾರದ ಮುಂದೆ ಬಾಕಿ ಇವೆ; (ಹೆಸರು ಹಾಗೂ ವಿಳಾಸವಾರು ಮಾಹಿತಿ ನೀಡುವುದು) | ಯುವನಿಧಿ ಮಾರ್ಗಸೂಚಿಗಳ ಅನ್ವಯ ಫಲಿತಾಂಶ ಪ್ರಕಟವಾಗಿ 180 ದಿನಗಳನ್ನು ಪೂರೈಸದ 16,424 ಅಭ್ಯರ್ಥಿಗಳು ಹಾಗೂ ರಹವಾಸಿ ದೃಢೀಕರಣಕ್ಕಾಗಿ ಭೌತಿಕ ಪರಿಶೀಲನೆಗೆ ಬಾಕಿ ಇರುವ 16,344 ಅರ್ಜಿಗಳು ಸೇರಿದಂತೆ ಒಟ್ಟು 32,768 ಅರ್ಜಿಗಳು ನಿರುದ್ಯೋಗ ಭತ್ಯೆ ಪಾವತಿಗೆ ಬಾಕಿ ಇರುತ್ತವೆ.<br><br>Digital personal data protection Act, 2023 ರ ಉಪಬಂಧಗಳಡಿ ಯುವನಿಧಿ ಯೋಜನೆಯಡಿ ನೋಂದಾಯಿಸಿದ ಫಲಾನುಭವಿಗಳ ವೈಯಕ್ತಿಕ ದತ್ತಾಂಶವನ್ನು/ ಪೂರ್ಣ ಮಾಹಿತಿಯುಳ್ಳ ಪಟ್ಟಿಯನ್ನು ಫಲಾನುಭವಿಗಳ ಒಪ್ಪಿಗೆ ಇಲ್ಲದೆ ಮೂರನೇ ವ್ಯಕ್ತಿಗಳಿಗೆ ಒದಗಿಸಲು ಅವಕಾಶವಿರುವುದಿಲ್ಲ |
| ಈ) | ಕೌಶಲ್ಯ ಅಭಿವೃದ್ಧಿ ಇಲಾಖೆಯಡಿ 2025-26ನೇ ಹಣಕಾಸಿನ ವರ್ಷದಲ್ಲಿ ಎಷ್ಟು ಮಂದಿಗೆ ಕೌಶಲ್ಯ ತರಬೇತಿ ನೀಡಲಾಗಿದೆ? (ವಿವರ ನೀಡುವುದು) | **1. ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ:**<br><br>ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಯುವನಿಧಿ ಪ್ಲಸ್ ಕಾರ್ಯಕ್ರಮದಡಿ ಯುವನಿಧಿ ಯೋಜನೆಗೆ ನೋಂದಾಯಿಸಿಕೊಂಡ ಫಲಾನುಭವಿಗಳಿಗೆ ಆದ್ಯತೆ ಮೇರೆಗೆ ಪರಿಗಣಿಸಿ ಉಚಿತ ಕೌಶಲ್ಯಾಧಾರಿತ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿರುತ್ತದೆ. |

| | | | |
|---|---|---|---|
| | | | ಪ್ರಸಕ್ತ ಸಾಲಿನ ಕ್ರಿಯಾಯೋಜನೆಯನ್ವಯ Industry Linkage Cell (ILC) & Future Skills ಕಾರ್ಯಕ್ರಮದ ಮುಖೇನ **3510** ಅಭ್ಯರ್ಥಿಗಳಿಗೆ ಹಾಗೂ ವಿವಿಧ ಖಾಸಗಿ ತರಬೇತಿದಾರ ಸಂಸ್ಥೆಗಳ ಮುಖೇನ 1830 ಅಭ್ಯರ್ಥಿಗಳಿಗೆ ಮತ್ತು ಸರ್ಕಾರಿ ತರಬೇತಿದಾರ ಸಂಸ್ಥೆಗಳ (ಜಿ.ಟಿ.ಟಿ.ಸಿ / ಐ.ಟಿ.ಐ / ಕೆ.ಜಿ.ಟಿ.ಟಿ.ಐ/ಮೋಕ್ಷಗುಂಡಂ/ ಸಿಡಾಕ್ ಮತ್ತು ಇತರೆ) ಮುಖೇನ 9400 ಅಭ್ಯರ್ಥಿಗಳಿಗೆ ಕೌಶಲ್ಯಾಧಾರಿತ ತರಬೇತಿಯನ್ನು ಕೈಗೊಳ್ಳುವ ಗುರಿಯೊಂದಿಗೆ ಕಾರ್ಯಾದೇಶವನ್ನು ನೀಡಲಾಗಿರುತ್ತದೆ (ವಿವರವನ್ನು **ಅನುಬಂಧ-2**ರಲ್ಲಿ ಒದಗಿಸಿದೆ).<br><br>**2. ರಾಷ್ಟ್ರೀಯ ಜೀವನೋಪಾಯ ಅಭಿಯಾನ:**<br>ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಮೂಲಕ ಪ್ರಸಕ್ತ ಸಾಲಿನಲ್ಲಿ ಜನವರಿ-2026ರ ಮಾಹೆಯ ಅಂತ್ಯದವರೆಗೆ ಕೇಂದ್ರ ಪುರಸ್ಕೃತ ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿ 704 ಗ್ರಾಮೀಣ ಯುವಕ-ಯುವತಿಯರಿಗೆ ಕೌಶಲ್ಯ ಆಧಾರಿತ ತರಬೇತಿಗಳನ್ನು ನೀಡಿ ವೇತನಾಧಾರಿತ ಉದ್ಯೋಗಗಳನ್ನು ಒದಗಿಸಲಾಗಿದೆ ಮತ್ತು ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಕೇಂದ್ರಗಳು ಕಾರ್ಯಕ್ರಮದಡಿ 24043 ಯುವಕ-ಯುವತಿಯರಿಗೆ ಸ್ವ-ಉದ್ಯೋಗ ಆಧಾರಿತ ತರಬೇತಿಗಳನ್ನು ನೀಡಿ ಸ್ವ-ಉದ್ಯೋಗ ನಿರ್ವಹಿಸಲು ಬೆಂಬಲಿಸಲಾಗುತ್ತಿದೆ. |

**ಸಂಖ್ಯೆ: ಕೌಉಜೀಇ 07 ಕೈತಪ್ರ 2026**

(ಡಾ. ಶರಣಪ್ರಕಾಶ ಆರ್ ಪಾಟೀಲ)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.

# ಅನುಬಂಧ-01

## ಯುವನಿಧಿ ಯೋಜನೆ ಅಡಿ ನೋಂದಾಯಿಸಿರುವ ಹಾಗೂ ಅರ್ಹ ಫಲಾನುಭವಿಗಳ ಜಿಲ್ಲಾವಾರು ವಿವರ

| ಕ್ರ.ಸಂ. | ಜಿಲ್ಲೆ | ನೋಂದಣಿ | ಅರ್ಹ ಫಲಾನುಭವಿಗಳು | ಪಾವತಿಸಿರುವ ಒಟ್ಟು ಮೊತ್ತ |
|---|---|---|---|---|
| 1 | ಬಾಗಲಕೋಟೆ | 24,086 | 16,911 | 49,53,89,000 |
| 2 | ಬಳ್ಳಾರಿ | 12,259 | 8,888 | 25,20,86,000 |
| 3 | ಬೆಳಗಾವಿ | 48,656 | 34,169 | 96,72,84,500 |
| 4 | ಬೆಂಗಳೂರು ಗ್ರಾಮಾಂತರ | 4,197 | 3,252 | 9,54,09,000 |
| 5 | ಬೆಂಗಳೂರು ನಗರ | 20,514 | 15,961 | 45,53,03,500 |
| 6 | ಬೀದರ | 16,388 | 12,133 | 35,02,56,500 |
| 7 | ಚಾಮರಾಜನಗರ | 5,300 | 3,994 | 12,48,30,000 |
| 8 | ಚಿಕ್ಕಬಳ್ಳಾಪುರ | 5,909 | 4,574 | 13,14,00,000 |
| 9 | ಚಿಕ್ಕಮಗಳೂರು | 5,785 | 4,564 | 14,38,95,000 |
| 10 | ಚಿತ್ರದುರ್ಗ | 11,001 | 8,783 | 27,24,28,500 |
| 11 | ದಕ್ಷಿಣ ಕನ್ನಡ | 7,473 | 6,283 | 18,12,90,000 |
| 12 | ದಾವಣಗೆರೆ | 13,796 | 11,081 | 34,75,00,000 |
| 13 | ಧಾರವಾಡ | 11,539 | 8,977 | 26,05,99,500 |
| 14 | ಗದಗ | 8,171 | 6,072 | 18,69,61,500 |
| 15 | ಹಾಸನ | 10,351 | 8,187 | 24,46,41,000 |
| 16 | ಹಾವೇರಿ | 11,695 | 8,988 | 26,68,95,000 |
| 17 | ಕಲಬುರಗಿ | 29,486 | 21,944 | 66,74,40,500 |
| 18 | ಕೊಡಗು | 2,181 | 1,740 | 4,93,92,000 |
| 19 | ಕೋಲಾರ | 5,994 | 4,562 | 13,43,91,000 |
| 20 | ಕೊಪ್ಪಳ | 13,703 | 9,833 | 28,48,48,500 |
| 21 | ಮಂಡ್ಯ | 9,459 | 7,226 | 21,83,37,000 |
| 22 | ಮೈಸೂರು | 16,654 | 12,993 | 38,40,63,500 |
| 23 | ರಾಯಚೂರು | 24,408 | 17,922 | 56,24,87,000 |
| 24 | ರಾಮನಗರ | 4,722 | 3,799 | 11,22,48,000 |
| 25 | ಶಿವಮೊಗ್ಗ | 11,621 | 8,750 | 26,68,45,500 |
| 26 | ತುಮಕೂರು | 11,780 | 9,174 | 28,84,06,500 |
| 27 | ಉಡುಪಿ | 4,687 | 3,813 | 10,92,21,000 |
| 28 | ಉತ್ತರಕನ್ನಡ | 8,680 | 6,892 | 20,94,49,500 |
| 29 | ವಿಜಯನಗರ | 12,420 | 8,663 | 25,22,49,000 |
| 30 | ವಿಜಯಪುರ | 25,315 | 18,938 | 51,77,87,000 |
| 31 | ಯಾದಗಿರಿ | 11,840 | 9,201 | 29,13,15,000 |
| **ಒಟ್ಟು** | | **4,10,070** | **3,08,267** | **9,12,46,50,000** |

Umadevi. G

(ಜಿ.ಉಮಾದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.

## ಅನುಬಂಧ-2

**1) ILC & Future Skills ಕಾರ್ಯಕ್ರಮದ ಮುಖೇನ ಕಾರ್ಯಾದೇಶ ನೀಡಿರುವ ತರಬೇತಿಗಳ ವಿವರ :**

| ಕ್ರಮ ಸಂಖ್ಯೆ | ಜಿಲ್ಲೆ | ತರಬೇತಿ ನೀಡುವ ಕೈಗಾರಿಕೆ ಸಂಸ್ಥೆಯ ಸಂಖ್ಯೆ | ಒಟ್ಟು ಅಭ್ಯರ್ಥಿಗಳ ಸಂಖ್ಯೆ |
|---|---|---|---|
| 01 | ಬೆಳಗಾಂ | 1 | 120 |
| 02 | ಬೆಂಗಳೂರುನಗರ | 9 | 1710 |
| 03 | ಚಿತ್ರದುರ್ಗ | 1 | 60 |
| 04 | ಧಾರವಾಡ | 1 | 60 |
| 05 | ಕಲಬುರಗಿ | 3 | 450 |
| 06 | ಕೊಡಗು | 1 | 60 |
| 07 | ಕೊಪ್ಪಳ | 2 | 390 |
| 08 | ಮೈಸೂರು | 1 | 60 |
| 09 | ರಾಮನಗರ | 1 | 360 |
| 10 | ಶಿವಮೊಗ್ಗ | 1 | 60 |
| 11 | ಉಡುಪಿ | 1 | 180 |
| **ಒಟ್ಟು** | | **22** | **3510** |

**2) ಖಾಸಗಿ ತರಬೇತಿದಾರ ಸಂಸ್ಥೆಗಳ (VTP) ಕಾರ್ಯಕ್ರಮದ ಮುಖೇನ ಕಾರ್ಯಾದೇಶ ನೀಡಿರುವ ತರಬೇತಿಗಳ ವಿವರ :**

| ಕ್ರಮ ಸಂಖ್ಯೆ | ಜಿಲ್ಲೆ | ತರಬೇತಿ ನೀಡುವ ಸಂಸ್ಥೆಯ ಸಂಖ್ಯೆ | ಒಟ್ಟು ಅಭ್ಯರ್ಥಿಗಳ ಸಂಖ್ಯೆ |
|---|---|---|---|
| 01 | ಬೆಂಗಳೂರುನಗರ | 2 | 150 |
| 02 | ಧಾರವಾಡ | 1 | 60 |
| 03 | ಗದಗ | 2 | 180 |
| 04 | ಹಾವೇರಿ | 3 | 240 |
| 05 | ಕಲಬುರಗಿ | 1 | 60 |
| 06 | ಕೋಲಾರ | 1 | 90 |
| | ಕೊಪ್ಪಳ | 1 | 60 |
| 07 | ಮೈಸೂರು | 2 | 420 |
| 08 | ರಾಯಚೂರು | 2 | 150 |
| 09 | ಶಿವಮೊಗ್ಗ | 1 | 60 |
| 10 | ವಿಜಯಪುರ | 3 | 240 |
| 11 | ಯಾದಗಿರಿ | 2 | 120 |
| ಒಟ್ಟು | | **21** | **1830** |

**3) ಸರ್ಕಾರಿ ತರಬೇತಿ ಸಂಸ್ಥೆಗಳ ಕಾರ್ಯಕ್ರಮದ ಮುಖೇನ ಕಾರ್ಯಾದೇಶ ನೀಡಿರುವ ತರಬೇತಿಗಳ ವಿವರ :**

| ಕ್ರಮ ಸಂಖ್ಯೆ | ಸರ್ಕಾರಿ ತರಬೇತಿ ಸಂಸ್ಥೆಗಳ ವಿವರ | ಒಟ್ಟು ಅಭ್ಯರ್ಥಿಗಳ ಸಂಖ್ಯೆ |
|---|---|---|
| 01 | ಜಿ.ಟಿ.ಟಿ.ಸಿ | 1900 |
| 02 | ಕೆ.ಜಿ.ಟಿ.ಟಿ.ಐ | 1420 |
| 03 | ಐ.ಟಿ.ಐ | 1900 |
| 04 | ಮೋಕ್ಷಗುಂಡಂ | 810 |
| 05 | ಇತರೆ (KSOU, ಸಿಡಾಕ್, BSNL) | 3370 |
| **ಒಟ್ಟು** | | **9400** |

Umadevi.G.

(ಜಿ.ಉಮಾದೇವಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.